**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು</u>**

**<u>ಸಿ.ಸಿ ನಂಃ 378/2021</u>**

| | | | |
|---|---|---|---|
| ಸಾಕ್ಷಿದಾರರ ಹೆಸರು | | ರೇವಣಸಿದ್ದಪ್ಪಾ | ಪಿ.ಡಬ್ಲೂ-07 |
| ತಂದೆಯ ಹೆಸರು | | ಸಿದ್ದಲಿಂಗಪ್ಪ | ಸಿ.ಡಬ್ಲೂ-11 |
| ವಯಸ್ಸು | | 47 ವರ್ಷ | |
| ಉದ್ಯೋಗ | | ಕೂಲಿ ಕೆಲಸ | ಸಾಕ್ಷಿಗೆ ಪ್ರಮಾಣ ವಚನ ಭೋಧಿಸಿದ ದಿನಾಂಕಃ25.03.2026. |
| ವಾಸಸ್ಥಳ | | ಭುಂಜಗನಗರ ಗ್ರಾಮ | |

**<u>ಸಾಕ್ಷಿಯ ಮುಖ್ಯ ವಿಚಾರಣೆಃ ಸಹಾಯಕ ಅಭಿಯೋಜಕರವರಿಂದಃ</u>**

ಸುಮಾರು 4-5 ವರ್ಷಗಳ ಹಿಂದೆ ಬಂಡ್ರಿ ಗ್ರಾಮದ ಹತ್ತಿರ ಅಪಘಾತ ಆಗಿರುತ್ತದೆ. ಕೂಡ್ಲಿಗಿ ಕಡೆಯಿಂದ ಒಂದು ಬೈಕ್ ಬರುತ್ತಿದ್ದು, ಆಗ ನಾನು ಸಂಡೂರಿನಿಂದ ಕೂಡ್ಲಿಗಿಗೆ ನನ್ನ ಲಾರಿಯಲ್ಲಿ ಹೋಗುತ್ತಿರುವಾಗ ಸದರಿ ಲಾರಿಯಿಂದ ಅಪಘಾತವಾಗಿರುತ್ತದೆ. ಸದರಿ ಅಪಘಾತದಲ್ಲಿ ಬೈಕ್ ಸವಾರನಿಗೆ ಗಾಯಗಳು ಆಗಿರುತ್ತವೆ. ಬೈಕ್ ನಂಬರ ನನಗೆ ಗೊತ್ತಿಲ್ಲ. ನನ್ನ ಲಾರಿ ನಂಃಕೆಎ-35-ಸಿ-6141 ಇರುತ್ತದೆ. ನಾನು ಸದರಿ ಲಾರಿಯ ಮಾಲೀಕನಾಗಿರುತ್ತೇನೆ.

ಪೊಲೀಸರು ನನಗೆ ನೋಟಿಸ್ ನೀಡಿರುತ್ತಾರೆ. ಸದರಿ ನೋಟಿಸ್ ನ್ನು ಸ್ವೀಕರಿಸಿ, ಅದಕ್ಕೆ ಉತ್ತರ ನೀಡಿ ನಾನು ಠಾಣೆಗೆ ಹಾಜರಾಗಿ ನನ್ನ ಲಾರಿಯ ದಾಖಲೆಗಳನ್ನು ಕೊಟ್ಟು ಇಡ್ಮನಿಟಿ ಬಾಂಡ್ ಬರೆದು ವಾಹನವನ್ನು ಬಿಡಿಸಿಕೊಂಡಿರುತ್ತೇನೆ. ಸಾಕ್ಷಿಯು ಸದರಿ ನೋಟಿಸ್ ನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-11 ಎಂದು ಸಾಕ್ಷಿಯ ಸಹಿಯನ್ನು ನಿಪಿ-

11(ಎ) ಎಂದು ಗುರುತಿಸಲಾಯಿತು. ಸದರಿ ಉತ್ತರ ನೋಟಿಸ್ ನಲ್ಲಿ ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-12 ಎಂದು ಸಾಕ್ಷಿಯ ಸಹಿಯನ್ನು ನಿಪಿ-12(ಎ) ಎಂದು ಗುರುತಿಸಲಾಯಿತು. ಇಡ್ಮನಿಟಿ ಬಾಂಡ್ ನಲ್ಲಿರುವ ಸಾಕ್ಷಿಯ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-13 ಎಂದು ಸಾಕ್ಷಿಯ ಸಹಿಯನ್ನು ನಿಪಿ-13(ಎ) ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಸ್.ಯು.ಎನ್ ವಕೀಲರಿಂದ</u>**

ಅಪಘಾತವು ಮೃತ ವ್ಯಕ್ತಿಯ ತಪ್ಪಿನಿಂದ ಆಗಿರುತ್ತದೆ ಎಂದರೆ ಸರಿ. ಸದರಿ ವ್ಯಕ್ತಿಯು ಕೆ.ಎಸ್.ಅರ್.ಟಿ.ಸಿ ಬಸ್ ಓವರ ಟೆಕ್ ಮಾಡುವಾಗ ಅಪಘಾತಕ್ಕೆ ಒಳಗಾಗಿರುತ್ತಾನೆ ಎಂದರೆ ಸರಿ. ನನ್ನ ಲಾರಿಯ ಚಾಲಕ ನಿಧಾನವಾಗಿ ವಾಹನ ಚಲಾಯಿಸುತ್ತಿದ್ದನು ಎಂದರೆ ಸರಿ. ಅಪಘಾತವು ಮೃತ ವ್ಯಕ್ತಿಯ ನಿರ್ಲಕ್ಷತನದಿಂದ ಅಗಿರುತ್ತದೆ ಎಂದರೆ ಸರಿ. ಪೊಲೀಸರು ದಾಖಲೆಗಳಲ್ಲಿ ಸಹಿ ಮಾಡಲು ಹೇಳಿದಕ್ಕೆ ಮಾತ್ರ ಸಹಿ ಮಾಡಿರುತ್ತೇನೆ ಅದರಲ್ಲಿ ಬರೆದ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ.

**ಮರು ವಿಚಾರಣೆಃ ಇಲ್ಲ**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ.ಇದೆ.**

**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸಂಡೂರು**